# ಶ್ರೀಹರಿಯಲ್ಲಿ ನವವಿಧ ಭಕ್ತಿ - ೨

◆ ಲೇಖಕರು : ಶ್ರೀಮತಿ ಶಶಿಕಲಾ ಶ್ರೀಧರ್ ಚಿತ್ರಗಳು: ಶ್ರೀ ನರಸಿಂಹ ಹೆಗ್ಡೆ

(ಹಿಂದಿನ ಸಂಚಿಕೆಯಿಂದ ಮುಂದುವರೆದುದು)

## ೪. ಪಾದಸೇವನಂ



ಭಗವಂತನ ಪಾದಪದ್ಮಗಳ ಸೇವೆ ಮಾಡುವುದು, ಭಗವಂತನ ಪ್ರತಿರೂಪವೇ ಆಗಿರುವ ಸದ್ಗುರುಗಳ ಪಾದಸೇವೆ ಮಾಡುವುದು, ಭಗವತ್ಪ್ರೀತಿಗಾಗಿ ಸಂತಭಕ್ತರ ಸೇವೆ ಮಾಡುವುದು, ಭಗವತ್ಪರವಾದ ಕೈಂಕರ್ಯವನ್ನು ಮಾಡುವುದು ಇವೇ ಪಾದಸೇವನ ಭಕ್ತಿಯ ಸಮಗ್ರ ರೂಪವಾಗುತ್ತವೆ. ಸದ್ಗುರುವಿನಲ್ಲೂ, ಜ್ಞಾನಿಗಳಲ್ಲೂ, ಸಂತರಲ್ಲೂ ಪರಮಾತ್ಮನು ಪ್ರತಿಷ್ಠಿತನಾಗಿರುತ್ತಾನೆ ಎನ್ನುತ್ತಾರೆ ಸದಾಶಿವಬ್ರಹ್ಮೇಂದ್ರರು. ಶ್ರೀಸಮರ್ಥ ರಾಮದಾಸರು ಭಗವಂತನಲ್ಲಿ ಅನನ್ಯ ಶರಣಾಗತಿ ಇರುವುದಕ್ಕೆ ಪಾದಸೇವನ ಎನ್ನುತ್ತಾರೆ. ಪಾದಸೇವೆ ಎಂಬುದು ಬಹು ಪ್ರಾಚೀನದಿಂದಲೂ ಬೆಳೆದು ಬಂದಿರುವ ಭಕ್ತಿರೂಪ. ಹರಿಚರಣಗಳನ್ನು ಪೂಜಿಸುವ ಮತ್ತು ಕೊಂಡಾಡುವ ಪರಿ ಅನಂತ. ಈ ಪಾವನ ಚರಣಗಳಲ್ಲಿ ಧೂಳಿನ ಕಣವಾಗಲು, ಅವನ ಚರಣಕಮಲಗಳಲ್ಲಿ ದುಂಬಿಯಾಗಲು ಭಕ್ತರು ಹಂಬಲಿಸುತ್ತಾರೆ.

ತ್ಯಾಗರಾಜರು ಪಾದಸೇವನ ಭಕ್ತಿಯಲ್ಲಿ ವಿಶೇಷವಾಗಿ ಆಕರ್ಷಿತರಾಗಿದ್ದಾರೆ. ರಾಮಾವತಾರದಲ್ಲಿ ಮುನಿಗಳು ಶ್ರೀರಾಮಪಾದಸೇವೆಯಿಂದ ಸತ್ಪದವಿಯನ್ನು ಪಡೆದರೆ, ಭಕ್ತಿಭರಿತ ಭರತ ರಾಮನ ಪಾದಸೇವೆಯಿಂದ ಶ್ರೀರಾಮನನ್ನೇ ಪಡೆದಿದ್ದಾನೆ. ಭಗವಂತನ ಪಾದಪದ್ಮಗಳ ಸೇವೆಗಿಂತ ಮಿಗಿಲಾದ ಭಾಗ್ಯವಿಲ್ಲವೆಂದು 'ಇದೇ ಭಾಗ್ಯಮು' ಎಂಬ ತಮ್ಮ ಕೃತಿಯಲ್ಲಿ ಹೇಳಿದ್ದಾರೆ. ಮುಂದೆ 'ಶ್ರೀಪತೇ ನೀ ಪದ ಚಿಂತನಮೇ ಜೀವನಮು' ಎನ್ನುತ್ತಾ 'ನೀ ಪದಪಂಕಜ ಮುಲನುನೇ ನೆರನಮ್ಮಿನಾನು'—ಅಹಲ್ಯಾ ಶಾಪವಿಮೋಚನಗೈದ ಶ್ರೀರಾಮನ ದಿವ್ಯಪಾದಗಳನ್ನು ಸದಾ ನಂಬಿರುವುದಾಗಿ ಹೇಳುತ್ತಾರೆ. ಶ್ರೀರಾಮಾನುಜಾಚಾರ್ಯರ ಪರಮಾಚಾರ್ಯರಾದ ಶ್ರೀಯಾಮುನಾಚಾರ್ಯರು

ಕದಾ ಪುನಶ್ಶಂಖ-ರಥಾಂಗ-ಕಲ್ಪಕ।
ಧ್ವಜಾರವಿಂದಾಂಕುಶ-ವಜ್ರಲಾಂಛನಮ್॥
ತ್ರಿವಿಕ್ರಮ ತ್ವಚ್ಚರಣಾಂಬುಜದ್ವಯಂ।
ಮದೀಯ ಮೂರ್ಧಾನಮಲಂಕರಿಷ್ಯತಿ॥

'ಮೂರು ಹೆಜ್ಜೆಗಳಿಂದ ಮೂರುಲೋಕಗಳನ್ನು ಅಳೆದ ತ್ರಿವಿಕ್ರಮನೇ, ಶಂಖಚಕ್ರಾದಿ ರೇಖೆಗಳಿಂದ ಅಂಕಿತವಾದ ನಿನ್ನ ಪಾದಾರವಿಂದಯುಗಳವು ಎಂದಿಗೆ ನನ್ನ ತಲೆಯನ್ನು ಅಲಂಕರಿಸುವುದು?" ಎಂದು ಪ್ರಶ್ನಿಸುತ್ತ ಪರಮಾತ್ಮನ ಪಾದಾರವಿಂದಗಳೇ ಅವಲಂಬನ, ಮೋಕ್ಷದಾಯಕ" ಎನ್ನುತ್ತಾರೆ. ಇದನ್ನೇ ಕುಲಶೇಖರ ಆಳ್ವಾರರು ತಮ್ಮ 'ಮುಕುಂದ ಮಾಲಾ' ಸ್ತೋತ್ರದಲ್ಲಿ

ಏತತ್ಪ್ರಾರ್ಥ್ಯಂ ಮಮ ಬಹುಮತಂ ಜನ್ಮಜನ್ಮಾಂತರೇಽಪಿ।
ತ್ವತ್ಪಾದಾಂಭೋರುಹ ಯುಗಗತಾ ನಿಶ್ಚಲಾ ಭಕ್ತಿರಸ್ತು ॥

"ಜನ್ಮಜನ್ಮಗಳಲ್ಲೂ ನಾನು ಇದನ್ನೇ ಕೇಳಿಕೊಳ್ಳುವುದು—ಯುಗಯುಗಗಳಲ್ಲೂ ನಿನ್ನ ಪಾದಾರವಿಂದಗಳಲ್ಲಿ ನಿಶ್ಚಲವಾದ ಭಕ್ತಿಯಿರಲಿ"ಎಂದು ಪ್ರಾರ್ಥಿಸುತ್ತಾರೆ.

## ೫. ಅರ್ಚನಭಕ್ತಿ

ಸದಾಶಿವ ಬ್ರಹ್ಮೇಂದ್ರರು, 'ಭಗವಂತನನ್ನು 'ಪೃಥ್ವೀ' ತತ್ತ್ವದ ಅರ್ಚಾ- ವಿಗ್ರಹಗಳ ಅಥವಾ ಚಿತ್ರಪಟಗಳ ಮೂಲಕ, 'ಅಪ್' ತತ್ತ್ವದ ಕಲಶಸ್ಥಾಪನೆಯಿಂದ, 'ತೇಜಸ್' ತತ್ತ್ವದ ಯಜ್ಞಗಳ ಮೂಲಕ, 'ವಾಯು' ತತ್ತ್ವದ ಪ್ರಾಣಾಯಾಮಾದಿ ಹಂಸಯೋಗ ಕ್ರಿಯೆಗಳ ಮೂಲಕ, 'ಆಕಾಶ' ತತ್ತ್ವದ ಚಿದ್ವ್ಯೋಮದಲ್ಲಿ ಧ್ಯಾನಧಾರಣಾದಿ ಕ್ರಿಯೆಗಳ ಮೂಲಕ, ಗುರುಶಾಸ್ತ್ರೋಕ್ತ ರೀತಿಯಲ್ಲಿ ವಿಧಿನಿಯಮಗಳನ್ನು ಅನುಸರಿಸಿ ಪೂಜಿಸುವುದೇ ಅರ್ಚನಭಕ್ತಿ ಎಂದು ವಿವರಿಸುತ್ತಾರೆ. ಈ ಪೂಜೆಗಳಲ್ಲಿ ಶ್ರದ್ಧಾಭಕ್ತಿಗಳು ವಿಶೇಷ ಸಾಮಗ್ರಿಗಳಾಗುತ್ತವೆ, ಗಂಧ ಪುಷ್ಪ ಧೂಪ ದೀಪ ನೈವೇದ್ಯಾದಿಗಳು ಇತರ ಸಾಮಗ್ರಿಗಳಾಗುತ್ತವೆ. ಶರೀರ ಮತ್ತು ಮನಸ್ಸುಗಳನ್ನು ಪರಿಶುದ್ಧವಾಗಿರಿಸಿಕೊಂಡು ಮಾಡಿದ ಅರ್ಚನೆ ವಿಶೇಷ ಫಲವನ್ನು ಅನುಗ್ರಹಿಸುತ್ತದೆ ಎಂದು ಹೇಳುತ್ತಾರೆ.

ಕಾಯಾ ವಾಚಾ ಅಣಿ ಮನೇ ।
ಚಿತ್ತೇ ವಿತ್ತೇ ಜೀವೇ ಪ್ರಾಣೇ॥
ಸದ್ಭಾವೇ ಭಗವಂತ ಅರ್ಚಣೇ ।
ಯಾನಾವ ಅರ್ಚನ ಭಕ್ತಿ॥



'ಶರೀರದಿಂದಲೂ, ವಾಣಿಯಿಂದಲೂ, ಮನಸ್ಸಿನಿಂದಲೂ, ಚಿತ್ತವಿತ್ತಗಳಿಂದಲೂ, ಜೀವ-ಪ್ರಾಣಗಳಿಂದಲೂ ಈಶ್ವರನನ್ನು ಸದ್ಭಾವದಿಂದ ಅರ್ಚಿಸುವುದಕ್ಕೆ ಅರ್ಚನಭಕ್ತಿ ಎನ್ನುತ್ತಾರೆ'' ಎಂದು ಹೇಳುತ್ತಾರೆ ಸಮರ್ಥ ರಾಮದಾಸರು.

ತ್ಯಾಗರಾಜರು ಅರ್ಚನಭಕ್ತಿಯ ಶ್ರೇಷ್ಠತೆಯನ್ನು ತಮ್ಮ ಹಲವಾರು ಕೃತಿಗಳಲ್ಲಿ ಮುಕ್ತಕಂಠದಿಂದ ಹಾಡಿದ್ದಾರೆ. ದೇವರನ್ನು ಧ್ಯಾನ ಆವಾಹನಾದಿ ಷೋಡಶೋಪಚಾರಗಳಿಂದ ಪೂಜಿಸುವುದು ಅರ್ಚನಭಕ್ತಿ. ಬಾಹ್ಯಪೂಜೆ ಹಾಗೂ ಮಾನಸಿಕ ಪೂಜೆ ಎಂಬ ಎರಡು ಬಗೆಯ ಅರ್ಚನೆಯನ್ನು ತ್ಯಾಗ ರಾಜರು ತಮ್ಮ ಕೃತಿಗಳಲ್ಲಿ ವರ್ಣಿಸಿದ್ದಾರೆ. ಸಂಸಾರದ ಬಂಧನ ಗಳಿಂದ ಬಿಡಿಸಿಕೊಳ್ಳಲು ಅರ್ಚನಭಕ್ತಿಯೇ ಉತ್ತಮ ಸಾಧನ ವೆಂದೂ ಇದನ್ನು ರಾಜಪಥವೆಂದೂ ಕರೆಯುತ್ತಾರೆ. ಈ ಅರ್ಚನೆಗೆ ಯೋಗ್ಯವಾದುದು ಪೂಜಾರ್ಹವಾದ ಪರಿಮಳ ಯುಕ್ತ ಪುಷ್ಪಗಳು ಮಾತ್ರ. ಶ್ರೀರಾಮನನ್ನು ಸುಗಂಧಯುಕ್ತ ವಾದ ಜಾಜಿ, ಮಲ್ಲಿಗೆ, ಪಾರಿಜಾತ, ದವನ, ತುಲಸಿ, ಬಿಲ್ವಪತ್ರ, ಪುನ್ನಾಗ, ಚಂಪಕ, ಪಾಟಲ, ಕುರವಕ, ಕರವೀರ, ಸುಗಂಧ ರಾಜ ಮುಂತಾದ ಶುದ್ಧವಾದ ಹೂಗಳಿಂದ ಅರ್ಚಿಸು ವುದಲ್ಲದೆ ಇವೆಲ್ಲಕ್ಕಿಂತಲೂ ಮುಖ್ಯವಾದ ಹೃದಯಕಮಲ ದಿಂದ ಅರ್ಚಿಸಿ, ಜನನಮರಣಗಳಿಂದ ಮುಕ್ತರಾಗಲು ಹೇಳುತ್ತಾರೆ.

ಬಾಹ್ಯೋಪಕರಣಗಳಿಂದ, ಶುದ್ಧ ಮನಸ್ಸಿನಿಂದ ಪೂಜಿಸುತ್ತಾ ಹೋದಂತೆ ಭಕ್ತನಿಗೆ ಏಕಾಗ್ರತೆ ಗಾಢವಾಗಿ ಅವನು ಮಾನಸ ಪೂಜೆಯ ಹಂತ ತಲುಪುತ್ತಾನೆ. ಇದನ್ನು ತ್ಯಾಗರಾಜರು 'ಪರಿಪಾಲಯ ರಘುನಾಥ' ಎಂಬ ಕೃತಿಯಲ್ಲಿ ಅತ್ಯಂತ ಭಕ್ತಿಯಿಂದ ಈ ರೀತಿ ಹಾಡಿದ್ದಾರೆ: 'ರಘುನಾಥ! ನನ್ನನ್ನು ರಕ್ಷಿಸು. ನನ್ನೀ ದೇಹವೇ ನಿನ್ನ ಪ್ರೀತಿಯ ಆವಾಸಸ್ಥಾನ. ನನ್ನ ಸ್ಥಿರ ಚಿತ್ತವೇ ನಿನ್ನ ಸುವರ್ಣ ಸಿಂಹಾಸನ. ನಿನ್ನ ಪಾದಾರ ವಿಂದಗಳ ಧ್ಯಾನವೇ ನಿನ್ನ ಅಭಿಷೇಕದ ಪವಿತ್ರ ಗಂಗಾಜಲ. ಅಭಿಮಾನಪೂರ್ವಕವಾದ ನನ್ನ ಭಕ್ತಿಯೇ ನಿನಗೆ ಸಮರ್ಪಿಸುವ ವಸ್ತ್ರ. ನಿನ್ನ ದಿವ್ಯಘನ ಕೀರ್ತನೆಯೇ ನಿನಗೆ ಸಮರ್ಪಿಸುವ ಗಂಧವು. ನಿನ್ನ ಪವಿತ್ರವಾದ ನಾಮಸ್ಮರಣೆಯೇ ಸಂಪೂರ್ಣ ವಾಗಿ ಅರಳಿದ ಕಮಲಪುಷ್ಪ; ನನ್ನ ಹಿಂದಿನ ದುಷ್ಕೃತ ಫಲವೇ ನಿನ್ನ ಮುಂದೆ ಉರಿಯುತ್ತಿರುವ ಧೂಪ. ನಿನ್ನ ಪಾದಭಕ್ತಿಯೇ ನಿನ್ನೆದುರು ಬೆಳಗುತ್ತಿರುವ ದೀಪ, ನಾನು ಮಾಡುವ ಪೂಜಾಫಲವೆಲ್ಲವೂ ನಿನಗೆ ಸಮರ್ಪಿಸುವ ನೈವೇದ್ಯ. ನಾನು ಪಡೆಯುವ ಶಾಶ್ವತ ಸುಖವೇ ನಿನಗೆ ಸಮರ್ಪಿಸುವ ತಾಂಬೂಲ. ನಿನ್ನ ದರ್ಶನವೇ ದೀಪಾರಾಧನೆ. ಇದೇ ತ್ಯಾಗರಾಜನು ಮಾಡುವ ನಿಜಪೂಜಾವಿಧಿ.'' ಮುಂದೆ ಅರ್ಚನಭಕ್ತಿಯ ಶ್ರೇಷ್ಠತೆಯನ್ನು ವರ್ಣಿಸುತ್ತಾ ನಿನ್ನನ್ನು ಅರ್ಚಿಸಿದ ಇಂದ್ರಾದಿಗಳು ದಿಕ್ಕುಗಳಿಗೇ ರಾಜರಾಗಿ ಮೆರೆಯ ಲಿಲ್ಲವೇ? ಎಂದು ಕೇಳುತ್ತಾರೆ. ಈ ಅರ್ಚನೆಯನ್ನು ಅತ್ಯಂತ ಸುಲಭ ಸಾಧನೆಗಳಿಂದಲೂ ಮಾಡಬಹುದು. ಏನೂ ಇಲ್ಲದೆ ದೇವರ ನಾಮಾವಳಿಯೆಂಬ ಪುಷ್ಪಗಳಿಂದಲೂ ಅರ್ಚಿಸಿ ಜನುಮ ಸಾರ್ಥಕ ಪಡಿಸಿಕೊಳ್ಳಬಹುದು—'ನಾಮ ಕುಸುಮ ಮುಲಚೇ ಪೂಜಿಂಚೇ ನರಜನ್ಮಮೇ ಜನ್ಮಮು' ಎನ್ನುತ್ತಾರೆ.

### ೬. ವಂದನಾಭಕ್ತಿ

ವಂದನ ಎಂದರೆ ನಮಸ್ಕರಿಸುವುದು ಎಂದರ್ಥ. ಸದಾಶಿವ ಬ್ರಹ್ಮೇಂದ್ರರು ಹೇಳುತ್ತಾರೆ, ಈ ನಮಸ್ಕಾರವನ್ನು ಭಗವಂತನಿಗೆ ಮಾತ್ರವಲ್ಲ, ಅವನ ಮಹಿಮಾ ವಿಶೇಷಗಳು ಕಂಡುಬರುವ ಎಲ್ಲ ವ್ಯಕ್ತಿ ವಸ್ತುಗಳಿಗೂ ಸಲ್ಲಿಸಬೇಕು. ದೇವತೆಗಳು, ಗುರು ಹಿರಿಯರು, ಸಾಧುಸಂತರು, ಸಂನ್ಯಾಸಿ ಗಳು, ತಾಯಿ ತಂದೆಯರು, ಗೋಮಾತೆ, ದೇವಾಲಯ, ತೀರ್ಥಕ್ಷೇತ್ರಗಳು, ಮಹಾ ವೃಕ್ಷಗಳು, ದ್ವಿಜರು, ಪ್ರತಿಯೊಬ್ಬರಿಗೂ ಶ್ರದ್ಧಾಭಕ್ತಿಗಳಿಂದ ಸಲ್ಲಿಸುವ ವಂದನೆ ನೇರವಾಗಿ ಭಗವಂತ ನಿಗೇ ಸೇರುವುದು. ವಂದನಭಕ್ತಿಯಿಂದ ಮಾನವನ ಅಹಂಕಾರ ದೂರವಾಗುವುದು ಮತ್ತು ಪರಮಾತ್ಮನ ಅನುಗ್ರಹ ಭಕ್ತನ ಬಳಿಗೆ ಸುಲಭವಾಗಿ ಹರಿದು ಬಂದು ಸುಖಶಾಂತಿಯನ್ನು ಕರುಣಿಸುವುದು. ಶ್ರೀಕೃಷ್ಣ 'ನತಮಂದಾರ'—ನಮಿಸಿದವರಿಗೆ ದೇವಲೋಕದ ಮಂದಾರ ವೃಕ್ಷದಂತೆ. ಭಕ್ತನ ಎಲ್ಲ ಅಭೀಷ್ಟಗಳನ್ನು ಈಡೇರಿಸುತ್ತಾನೆ.

ಶ್ರೀಸಮರ್ಥ ರಾಮದಾಸರು ''ದೇವರನ್ನು, ಸಾಧು ಸಂತರನ್ನು ನಮಸ್ಕರಿಸಬೇಕು. ಭಕ್ತರು, ಜ್ಞಾನಿಗಳು, ವೈರಾಗ್ಯ ಯುಕ್ತರು, ಮಹಾನುಭಾವಿಗಳು, ತಾಪಸಿಗಳು, ಯೋಗಿಗಳು ಮೊದಲಾದ ಸತ್ಪಾತ್ರರನ್ನು ಕಂಡಕೂಡಲೇ ನಮಸ್ಕರಿಸಬೇಕು. ಎಲ್ಲೆಲ್ಲಿ ವಿಶೇಷ ಗುಣಗಳಿರುತ್ತವೆಯೋ ಅಲ್ಲೆಲ್ಲಾ ಭಗವಂತನ ಆವಿರ್ಭಾವವಿರುತ್ತದೆ, ಗುರುವಿನ ಅಧಿಷ್ಠಾನವಿರುತ್ತದೆ. ಈ ಎಲ್ಲೆಡೆಯಲ್ಲೂ ಭಕ್ತಿಯಿಂದ ನಮಸ್ಕರಿಸಬೇಕು. ನಮನದಿಂದ ನಮ್ರತೆ ಹುಟ್ಟುವುದು. ದ್ವಂದ್ವಭಾವ ಕಳೆಯುವುದು. ಸತ್ಪಾತ್ರ



ರೊಡನೆ ಸಖ್ಯ ಬೆಳೆಯುವುದು. ಇದರಿಂದ ಪಾಪದ ಪರ್ವತಗಳು ಕರಗಿ ಪರಮಾತ್ಮನ ಕೃಪೆ ದೊರೆಯುವುದು. ಭಕ್ತನಾದವನು ಭಾವಭಕ್ತಿಭರಿತನಾಗಿ ಭಗವಂತನಿಗೆ ಸಾಷ್ಟಾಂಗ ನಮಸ್ಕಾರ ಮಾಡಿದರೆ ಭಗವಂತ ಅವನನ್ನು ಹರಸಿ ಅವನ ಎಲ್ಲ ಯೋಗಕ್ಷೇಮವನ್ನು ತಾನೇ ವಹಿಸಿಕೊಳ್ಳುತ್ತಾನೆ" ಎನ್ನುತ್ತಾರೆ.

ತ್ಯಾಗರಾಜರು ವಂದನಭಕ್ತಿಯ ಬಗ್ಗೆ ಎರಡು ರೀತಿಯಲ್ಲಿ ಹಾಡಿದ್ದಾರೆ. ಒಂದು ನೇರವಾಗಿ ಭಗವಂತನಿಗೆ ಸಲ್ಲುವ ನಮಸ್ಕಾರ. ಎರಡನೆಯದು ಭಗವತ್ಸ್ವರೂಪಿಗಳಾದ ಗುರುಹಿರಿಯರಿಗೆ, ಪರಮಭಕ್ತರಿಗೆ, ಮಹಾನುಭಾವರಿಗೆ ಸಲ್ಲುವ ಪ್ರಣಾಮ. ದೇವರಿಗೆ ಮಾಡುವ ಪ್ರದಕ್ಷಿಣೆ ನಮಸ್ಕಾರಗಳು ಶಂಕರಾಚಾರ್ಯರು ಹೇಳುವಂತೆ, **ನಮಸ್ಕಾರೋಷ್ಟಾಂಗಃ ಸಕಲ ದುರಿತಧ್ವಂಸನ ಪಟು**— ಸಕಲ ಪಾಪಗಳನ್ನು ಧ್ವಂಸ ಮಾಡಲು ಸಮರ್ಥವಾದುದು. ತ್ಯಾಗರಾಜರು ಈ ನಮಸ್ಕಾರದ ವಿಧಾನವನ್ನು ತಿಳಿಸುತ್ತಾರೆ: 'ಕರಚರಣಮುಲು ನೊಸಲು ಭುಜಮುಲು ಧರಣಿ ಸೋಕ ಮ್ರೊಕ್ಕಗಲೇವಾ' ಕೈಕಾಲುಗಳು ಹಣೆ ಹಾಗೂ ಭುಜಗಳು ನೆಲಕ್ಕೆ ತಾಗುವಂತೆ ಬಗ್ಗಿ ನಮಸ್ಕರಿಸಬೇಕು. ಅಲ್ಲದೆ ಮೂವತ್ತೆರಡು ಶುಭಲಕ್ಷಣಗಳನ್ನು ಹೊಂದಿರುವ ಶ್ರೀರಾಮನಿಗೆ ಮೂವತ್ತೆರಡು ಪ್ರದಕ್ಷಿಣ ನಮಸ್ಕಾರಗಳನ್ನು ತಮ್ಮೊಡನೆ ಕೂಡಿಮಾಡಲು ಎಲ್ಲರನ್ನೂ ಕರೆಯುತ್ತಾರೆ. ಈ ಜಗತ್ತಿನಲ್ಲಿ ಶ್ರೀರಾಮನ ದರ್ಶನ ಪಡೆದು ಆ ಬ್ರಹ್ಮಾನಂದವನ್ನು ಅನುಭವಿಸುವ ಎಷ್ಟು ಮಂದಿ ಮಹಾತ್ಮರಿದ್ದಾರೆಯೋ ಅವರಿಗೆಲ್ಲಾ 'ಎಂದರೋ ಮಹಾನುಭಾವುಲು ಅಂದರಿಕಿ ಮನವಂದನಮು' ಎಂದು ಹಾಡುತ್ತಾ ಭಕ್ತಿನಮನಗಳನ್ನು ಸಲ್ಲಿಸುತ್ತಾರೆ.

### ೭. ದಾಸ್ಯಭಕ್ತಿ

ಭಕ್ತನು ತನ್ನನ್ನು ದಾಸನೆಂದು ಭಾವಿಸಿಕೊಂಡು ಸಂತೋಷ-ಶ್ರದ್ಧೆಗಳಿಂದ ಪ್ರಭುವಾದ ಭಗವಂತನಿಗೆ ಸಲ್ಲಿಸುವ ಸೇವಾ ಕೈಂಕರ್ಯಗಳೇ ದಾಸ್ಯಭಕ್ತಿ. ಈ ದಾಸ್ಯಭಕ್ತಿಯು ಭಕ್ತನ ಪರಮೋನ್ನತಿಗೆ ಕಾರಣವಾಗುತ್ತದೆ. ನಿಜವಾದ ದಾಸನಾದವನು ಪ್ರಭುವಿನ ಪ್ರೀತಿಯೊಂದನ್ನೇ ಮುಖ್ಯ ಧ್ಯೇಯವಾಗಿಟ್ಟುಕೊಂಡು, ಯಾವ ಸ್ವಾರ್ಥವೂ ಇಲ್ಲದೆ ನಿಷ್ಕಾಮ ಸೇವೆ ಸಲ್ಲಿಸುವ ಕರ್ತವ್ಯಪರನಾದ ಸೇವಕನು ಎನ್ನುತ್ತಾರೆ ಬ್ರಹ್ಮೇಂದ್ರರು.



ಶ್ರೀಸಮರ್ಥರು ದಾಸ್ಯಭಕ್ತಿಯ ಬಗ್ಗೆ ವಿವರಿಸುತ್ತ 'ಭಗವಂತನಲ್ಲಿ ದಾಸ್ಯವೆಂದರೆ ಸದಾ ಅವನ ಸೇವೆಗೆ ಕಂಕಣ ಬದ್ಧನಾಗಿ ನಿಲ್ಲುವುದು, ಪ್ರಭುವಿನ ಆಣತಿಯನ್ನು ಶಿರಸಾವಹಿಸಿ ಪಾಲಿಸುವುದು, ಭಗವಂತನ ಯಾವುದೇ ಕಾರ್ಯವಿದ್ದರೂ ಅದರಲ್ಲಿ ಶ್ರೇಷ್ಠ, ಕನಿಷ್ಠ ಎಂದು ಪರಿಗಣಿಸದೆ, ಸೇವಾ ಮನೋಭಾವದಿಂದ, ವಿನಯ-ನಮ್ರತೆಗಳಿಂದ ಮಾಡಬೇಕು. ಭಕ್ತನು ಭಕ್ತಿಯ ವೈಭವವನ್ನು ಬೆಳೆಸಿಕೊಂಡಂತೆ ದೇವನು ಭಕ್ತನ ವೈಭವವನ್ನು ಬೆಳೆಸುವನು" ಎನ್ನುತ್ತಾರೆ.

ಸ್ವಾಮಿಯ ಎದುರು ದಾಸನ ಸ್ವಂತಿಕೆ ಏನೂ ಇಲ್ಲವೆನ್ನುತ್ತಾ ತ್ಯಾಗರಾಜರು 'ತವ ದಾಸೋऽಹಂ' ಎಂದು ರಾಮನನ್ನು ಪ್ರಾರ್ಥಿಸುತ್ತ "ರಾಮ, ನಿನಗೆ ಸರಿದೈವವು ಯಾರೂ ಇಲ್ಲ. ನಿನಗೆ ಸಂಪೂರ್ಣ ಶರಣಾಗಿದ್ದೇನೆ. ನಿನ್ನ ದಾಸನಾದ ನನ್ನನ್ನು ಕಾಪಾಡು. ನಿನ್ನ ಸೇವೆಗಾಗಿ ಆಂಜನೇಯ, ಲಕ್ಷ್ಮಣ, ಸೀತೆ ಎಲ್ಲರೂ ಇದ್ದರೂ ನನ್ನನ್ನು ಕಡೆಗಣಿಸಬೇಡ. ನನ್ನ ಸೇವೆಯನ್ನು ಸ್ವೀಕರಿಸು" ಎಂದು ಬೇಡುತ್ತಾರೆ.

ಅನ್ನಮಾಚಾರ್ಯರು ಹೇಳುವಂತೆ 'ಕೈವಲ್ಯಮುನಕಂಟೆ ಕೈಂಕರ್ಯಮಕ್ಕುಡು' ಎಂದರೆ ಕೈವಲ್ಯಕ್ಕಿಂತಲೂ ಕೈಂಕರ್ಯವೇ ಮಿಗಿಲಾದುದು. ಇದು ತ್ಯಾಗರಾಜರ ಅಭಿಪ್ರಾಯವೂ ಹೌದು. ಭಗವಂತನ ನಿಜದಾಸನಾಗಿ ಅವನ ಸಾನ್ನಿಧ್ಯದಲ್ಲಿ ಸದಾ ಇರುತ್ತಾ ಅವನ ಸೇವೆ ಮಾಡುವ ಭಾಗ್ಯಕ್ಕೆ ಮಿಗಿಲಾದುದು ಯಾವುದೂ ಇಲ್ಲ. ಶ್ರೀರಾಮನಿಗೆ ಗರುಡ, ಹನುಮರಂತೆ ದಾಸನಾಗಿ ಸದಾ ಸರ್ವದಾ ಕೈಂಕರ್ಯ ನಡೆಸ ಬೇಕೆಂಬ ಅತೀವ ಹಂಬಲ ಶ್ರೀತ್ಯಾಗರಾಜರದು.

ದಾಸ್ಯಭಕ್ತಿಯು ಪಕ್ವಗೊಂಡಂತೆ ಭಕ್ತನು ತಾನು ದೇವರ ಸ್ವತ್ತೆಂದೇ ಭಾವಿಸುತ್ತಾನೆ. ಅವನ ಇಚ್ಛೆಗನುಗುಣವಾಗಿ ಕೆಲಸ ನಿರ್ವಹಿಸುವುದಷ್ಟೇ ಅವನ ಕರ್ತವ್ಯವಾಗುತ್ತದೆ, ನಿಷ್ಠಾವಂತನಾಗಿದ್ದುಕೊಂಡು ಆತ್ಮಾರ್ಪಣೆಯೊಂದಿಗೆ ಸಂಕೀರ್ತನೆಯಲ್ಲಿ ತೊಡಗುತ್ತಾನೆ. ತನ್ನ ಸ್ವಾಮಿಯು ಇಂಗಿತವನ್ನರಿತು ಕಾರ್ಯೋನ್ಮುಖನಾಗುತ್ತಾನೆ. ತನ್ನೊಡೆಯನು ಅವುಗಳನ್ನು ವಿವರಿಸಿ ಹೇಳಬೇಕಾದ ಅವಶ್ಯಕತೆಯೇ ಬಾರದಂತೆ ಕಾರ್ಯ ನಿರ್ವಹಿಸುತ್ತಾನೆ. ಈ ಎಲ್ಲ ನಿಜದಾಸನ ಲಕ್ಷಣಗಳನ್ನು ಶ್ರೀತ್ಯಾಗರಾಜರು ಹೊಂದಿದ್ದರು. ಇಂತಹ ದಾಸಾಗ್ರೇಸರ ಕೇವಲ ಭಗವಂತನಿಗೆ ಮಾತ್ರ ದಾಸನಲ್ಲ. ಅವನ ದಾಸರ ದಾಸನಾಗಲು ತವಕಿಸುತ್ತಾನೆ. ಶ್ರೀಕುಲಶೇಖರ ಆಳ್ವಾರರು ತಮ್ಮ ಮೇರುಕೃತಿ 'ಮುಕುಂದಮಾಲಾ' ಸ್ತೋತ್ರದಲ್ಲಿ

**ತ್ವದ್ಭೃತ್ಯ ಭೃತ್ಯ ಪರಿಚಾರಕ ಭೃತ್ಯಭೃತ್ಯ । ಭೃತ್ಯಸ್ಯ ಭೃತ್ಯ ಇತಿ ಮಾಂ ಸ್ಮರ ಲೋಕನಾಥ॥**

ಎಂದರೆ ನಿನ್ನ ದಾಸದಾಸರ ದಾಸನಾಗುವ ಭಾಗ್ಯವನ್ನು ಕರುಣಿಸು ಎಂದು ಪ್ರಾರ್ಥಿಸುತ್ತಾರೆ. ಈ ಭಾವವನ್ನೇ ಪುರಂದರದಾಸರು, "ಹರಿದಾಸರ ದಾಸತ್ವವ ಪಡೆದ ನರ । ಜೀವನ್ಮುಕ್ತನೆನಿಸಿ ಕೀರ್ತಿ ಪಡೆದವ ॥" ಎನ್ನುತ್ತಾರೆ. ಭಕ್ತ ಕನಕದಾಸರು "ದಾಸರ ದಾಸರ ಮನೆಯ ದಾಸಿಯರ ಮಗ ನಾನು" ಎಂದೂ, ಶ್ರೀಪಾದರಾಯರು "ನಿನ್ನ ದಾಸರ ದಾಸರ ದಾಸರ ದಾಸ್ಯವ ಕೊಡು" ಎಂದೂ ತಮ್ಮ ದಾಸ್ಯಭಕ್ತಿಯನ್ನು ಅಭಿವ್ಯಕ್ತಪಡಿಸುತ್ತಾರೆ.

### ೮. ಸಖ್ಯಭಕ್ತಿ

ಭಗವಂತನನ್ನು ತನ್ನ ಪರಮಾಪ್ತನೆಂದು ಭಾವಿಸಿ ಅವನ ಸ್ನೇಹದಲ್ಲಿ ಸಂಪೂರ್ಣ ಮಗ್ನನಾಗಿ, ಅವನ ಸಾನ್ನಿಧ್ಯವನ್ನು, ಪ್ರೀತಿವಾತ್ಸಲ್ಯಗಳನ್ನು ಪಡೆಯುವುದೇ ಸಖ್ಯಭಕ್ತನ ಲಕ್ಷಣ. ಭಗವಂತನನ್ನು ಪ್ರೀತಿ, ಪ್ರೇಮಗಳಿಂದ ಬಂಧಿಸಬೇಕು. ಅವನಿಗೆ ಯಾವುದು ಅತ್ಯಂತ ಪ್ರಿಯವೋ ಅದರಂತೆ ವರ್ತಿಸಬೇಕು ಎಂಬುದಾಗಿ ಸಮರ್ಥರಾಮದಾಸರು ತಮ್ಮ ದಾಸಬೋಧದಲ್ಲಿ ಹೇಳುತ್ತಾರೆ. ಸಮರ್ಥರು "ಈಶ್ವರನೊಡನೆ ಹೆಚ್ಚಿನ ಸಖ್ಯವನ್ನು ಬೆಳೆಸಬೇಕು. ಅವನನ್ನು ಪ್ರೇಮ ಪ್ರೀತಿಗಳೆಂಬ ಸ್ನೇಹದಿಂದ (ಎಣ್ಣೆಯಿಂದ) ಬಂಧಿಸಬೇಕು. ಅವನಿಗೆ ಅತ್ಯಂತ ಪ್ರಿಯವಾಗುವಂತೆ ನಮ್ಮ ಪ್ರತಿಯೊಂದು ವರ್ತನೆಯೂ ಇದ್ದಲ್ಲಿ ಅವನ ಜೊತೆ ನಿಶ್ಚಿತವಾಗಿಯೂ ಸಖ್ಯವುಂಟಾಗುವುದು. ಈಶ್ವರನ ಸಖ್ಯಕ್ಕಾಗಿ ನಮ್ಮ ಸೌಖ್ಯವನ್ನು ಬಿಟ್ಟುಕೊಡಬೇಕು. ಆಲಸ್ಯವನ್ನು ತ್ಯಜಿಸಿ ಅನನ್ಯಭಾವದಿಂದಲೂ ಜೀವಪ್ರಾಣಗಳಿಂದಲೂ ತನ್ನನ್ನು ತಾನು ಸಂಪೂರ್ಣವಾಗಿ ವಿನಿಯೋಗಿಸಿಕೊಳ್ಳಬೇಕು. ನಮ್ಮದೆಲ್ಲವೂ ಹೋಗಲಿ, ದೇವನ ಸಖ್ಯವೊಂದಿರಲಿ ಎಂಬ ಅಂತಃಕರಣಪೂರ್ವಕವಾದ ಪ್ರೀತಿ ಭಗವಂತನಲ್ಲಿರಬೇಕು" ಎನ್ನುತ್ತಾರೆ.



ಮುಖ್ಯವಾಗಿ ಭಗವಂತನು ನನ್ನವನು, ನನಗೆ ಬಹಳವಾಗಿ ಬೇಕಾದವನು, ನಾನು ಅವನಿಗೆ ಸೇರಿದವನು, ಅವನೇ ನನ್ನ ಸರ್ವಸ್ವ ಎಂಬ ಗಾಢವಾದ ಭಾವನೆಯು ಸಖ್ಯಭಕ್ತಿಯಲ್ಲಿ ಅತ್ಯವಶ್ಯವಾದುದು. ಸಖ್ಯಭಕ್ತಿ ಇರಬೇಕಾದರೆ ಮಿತ್ರರಲ್ಲಿ ಕಂಡು ಬರುವ ಸಮಾನಧರ್ಮವು ಇರಬೇಕೆಂಬುದು ನ್ಯಾಯ. ಸ್ವರೂಪದೃಷ್ಟಿಯಿಂದ ವಿಚಾರ ಮಾಡಿದಾಗ ಭಗವಂತ, ಭಕ್ತ ಇಬ್ಬರು ಬೆಂಕಿ ಮತ್ತು ಅದರ ಕಿಡಿಯಂತೆ ಸಮಾನಧರ್ಮ ಹೊಂದಿರುವುದರಿಂದ ಪರಸ್ಪರರಲ್ಲಿ ಸಮಾನತೆ ಅನ್ಯೋನ್ಯತೆ ಉಂಟಾಗುವುದು ಅಸಂಭವವಲ್ಲ ಎನ್ನುತ್ತಾರೆ ಸದಾಶಿವ ಬ್ರಹ್ಮೇಂದ್ರರು.

ನಮ್ಮ ಇಚ್ಛೆ ಈಡೇರಲಿಲ್ಲವೆಂದು ದೇವರ ಮೇಲೆ ಕೋಪಗೊಳ್ಳುವುದು ಸಖ್ಯಭಕ್ತಿಯ ಲಕ್ಷಣವಲ್ಲ. ಇದು ನಮ್ಮ ನಿಷ್ಠೆಯನ್ನು ಕಡಿಮೆ ಮಾಡುತ್ತದೆ. ಹೇಗೆ ವೇಳೆಗೆ ಸರಿಯಾಗಿ ಚಂದ್ರೋದಯವಾಗದಿದ್ದರೂ ಚಕೋರವು ಚಂದ್ರನಿಗೆ ಅನ್ಯೋನ್ಯವಾಗಿಯೇ ಇರುತ್ತದೋ ಹಾಗೆಯೇ ಭಗವಂತನೊಡನೆ ನಮ್ಮ ಸಖ್ಯವು ಎಲ್ಲ ಕಾಲದಲ್ಲೂ, ಎಲ್ಲ ಸಂದರ್ಭ, ಸನ್ನಿವೇಶಗಳಲ್ಲೂ ಒಂದೇ ಸಮನೆ ಇರಬೇಕು, ಎಲ್ಲವನ್ನು ದೈವೇಚ್ಛೆಗೇ ಬಿಡಬೇಕು. ಅವನು ಏನೇ ಮಾಡಿದರೂ ನಮ್ಮ ಒಳಿತಿಗಾಗಿಯೇ ಮಾಡಿರುತ್ತಾನೆ. ಪ್ರಾಣಸ್ನೇಹಿತನಾದ ಅವನನ್ನು ಸಂಪೂರ್ಣವಾಗಿ ನಂಬಿ ನಮ್ಮನ್ನು ಅವನಿಗೇ ಒಪ್ಪಿಸಿಕೊಂಡು ಬಿಡಬೇಕು. ದೇವನೇ ಪರಮಮಿತ್ರ, ಅವನೇ ತಾಯಿ, ತಂದೆ, ಬಂಧು, ಬಳಗ, ವಿದ್ಯೆ, ವೈಭವ, ಸಂಪತ್ತು, ಎಲ್ಲಕ್ಕೂ ಮಿಗಿಲಾಗಿ ನಮ್ಮ ಹಿತಚಿಂತಕ. ದೇವನೇ ಸರ್ವಶಕ್ತನೆಂದಮೇಲೆ ಅವನು ಮಾಡಿದಂತಾಗಲಿ ಎಂದುಕೊಂಡು ಅವನ ಮೇಲೆ ಸಂಪೂರ್ಣ ಭರವಸೆಯನ್ನಿಟ್ಟುಕೊಳ್ಳುವುದು ಈ ಭಕ್ತನ ಲಕ್ಷಣ.

ಈ ಎಲ್ಲ ಭಾವಗಳನ್ನು ಪೂರ್ಣಗೊಳಿಸುತ್ತ ತ್ಯಾಗರಾಜರು ಹೇಳುತ್ತಾರೆ: ಭಗವಂತನನ್ನು ತನ್ನ ಪರಮಾಪ್ತ ಮಿತ್ರನೆಂದು ಕಾಣುವ ಈ ಸಖ್ಯಭಕ್ತಿಯಲ್ಲಿ ಭಕ್ತನಿಗೆ ಭಗವಂತನ ಬಗ್ಗೆ ಯಾವುದೇ ಭಯವಿಲ್ಲ; ಬದಲಾಗಿ ಅತ್ಯಂತ ಸಲಿಗೆ ಇದೆ.

ಅವನ ಬಳಿ ಮನಬಿಚ್ಚಿ ಮಾತನಾಡುತ್ತಾನೆ. ಅವನಿಗೆ ಬುದ್ಧಿ ಹೇಳುವ, ಟೀಕಿಸುವ, ನಿಂದಿಸುವ, ಹಾಸ್ಯಮಾಡುವ, ಕೋಪಗೊಳ್ಳುವ, ಕಡೆಗೆ ಹಕ್ಕು ಸಾಧಿಸುವ ಮಟ್ಟಕ್ಕೂ ಏರುತ್ತಾನೆ. ಇವೆಲ್ಲದರ ಅಂತರ್ಯದಲ್ಲಿ ಅತಿಮುಖ್ಯವಾಗಿ ಅವನಿಗೆ ತನ್ನ ಪ್ರಿಯಸಖನ ದೈವತ್ವದ ಅರಿವು ಸದಾ ಎಚ್ಚರವಾಗಿರುತ್ತದೆ. ಇಂತಹ ಸಖನನ್ನು ಕಂಡರೆ ಪರಮಾತ್ಮನಿಗೂ ಅತ್ಯಂತ ಪ್ರೀತಿ. ಗೀತೆಯ ವಿಭೂತಿಯೋಗದಲ್ಲಿ ಶ್ರೀಕೃಷ್ಣ ತನಗೆ ಅತ್ಯಂತ ಪ್ರಿಯಸ್ನೇಹಿತನು ಪಾಂಡವರಲ್ಲಿ ಒಬ್ಬನಾದ ಧನಂಜಯ ಎನ್ನುತ್ತಾನೆ. ರಾಮಾಯಣದಲ್ಲಿ ಶ್ರೀರಾಮಚಂದ್ರ **ಮಿತ್ರಭಾವೇನ ಸಂಪ್ರಾಪ್ತಂ**—ಮಿತ್ರಭಾವದಿಂದ ತನ್ನನ್ನು ಆರಾಧಿಸುವವರಿಗೆ ತಾನು ಸುಲಭವಾಗಿ ಪ್ರಾಪ್ತನಾಗುವವನು ಎನ್ನುತ್ತಾನೆ.

ಇಂತಹ ಉತ್ತಮ ಸಖ್ಯಭಕ್ತಿಯನ್ನು ತ್ಯಾಗರಾಜರು ತಮ್ಮ ಅನೇಕ ಕೀರ್ತನೆಗಳಲ್ಲಿ ಕೊಂಡಾಡುತ್ತಾ ಪರಮಾತ್ಮನನ್ನು 'ತ್ಯಾಗರಾಜ ಸಖುಡು' ಎಂದು ಸಂಬೋಧಿಸುತ್ತಾ, ಶ್ರೀರಾಮ ಅವರಿಗೆ ಸರಿಸಾಟಿಯಿಲ್ಲದ ಜೊತೆಗಾರ ಎಂದು ಹೇಳುತ್ತಾರೆ. 'ಇನ್ನಾಳ್ಳ ನನ್ನೇಲಿ' ಎಂಬ ಮತ್ತೊಂದು ಕೃತಿಯಲ್ಲಿ 'ಈಡುಜೋಡುಲೇನಿ ತೋಡು ನೀವೇಗಾನಿ'—ಎಂದರೆ ನಿನ್ನನ್ನು ನಾನು ಯಾವಾಗಲೂ ಅಸಾಮಾನ್ಯನಾದ ಸಂಗಾತಿ, ಕಷ್ಟದಲ್ಲಿ ಒದಗುವ ಮಿತ್ರ ಎಂದು ತಿಳಿದಿರುವೆನು ಎಂದು ಪ್ರಾರ್ಥಿಸುತ್ತಾರೆ. ಭಗವಂತನೊಡನೆ ಸಖಭಕ್ತನಾಗಿ ಅತ್ಯಂತ ಸಲಿಗೆಯಿಂದ "ನನ್ನನ್ನು ರಕ್ಷಿಸುವ ಮೂಲಕ ನಿನ್ನ ಕುಲದ ಬಿರುದನ್ನು ಕಾಪಾಡಿಕೋ" ಎಂದು ಜೋರುಮಾಡಿ ಹೇಳುತ್ತಾರೆ. ದೇವರನ್ನು ವರಮಿತ್ರ, ಚೆಲಿಕಾಡು (ಸ್ನೇಹಿತ), ತ್ಯಾಗರಾಜಮಿತ್ರ, ಪರಮಸಖ ಎಂಬುದಾಗಿ ಅನೇಕ ವಿಧವಾಗಿ ಕರೆಯುತ್ತಾ ಕೀರ್ತಿಸುತ್ತಾರೆ.

### ೯. ಆತ್ಮನಿವೇದನಂ

ಭಗವಂತನಲ್ಲಿ ಸಂಪೂರ್ಣ ಶರಣಾಗತಿಯೇ ಆತ್ಮನಿವೇದನ ಭಕ್ತಿ. ಇದು ಭಕ್ತಿಯ ಪರಾಕಾಷ್ಠೆ. ಈ ಹಂತದಲ್ಲಿ ಭಕ್ತನು ತನ್ನ ವ್ಯಕ್ತಿತ್ವವನ್ನು ಭಗವಂತನಲ್ಲೇ ಬೆರೆಸಿ ತಲ್ಲೀನನಾಗುತ್ತಾನೆ. ತಾನು ಇನ್ನು ಮುಂದೆ ದೇವರ ಸ್ವತ್ತೆಂದು ಭಾವಿಸುತ್ತಾನೆ. ಇದನ್ನೇ ವಿಶಿಷ್ಟಾದ್ವೈತ ಸಿದ್ಧಾಂತ 'ಪ್ರಪತ್ತಿ' ಎಂದು ಕರೆಯುತ್ತದೆ. ದೇವರ ಕೃಪೆಯೊಂದನ್ನೇ ಆಶ್ರಯಿಸುವುದು ನಿಜವಾದ ಪ್ರಪತ್ತಿ.

"ಈ ಆತ್ಮನಿವೇದನ ಭಕ್ತಿಯಿಂದ ಭಕ್ತನು ಭಗವಂತನ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ ಮತ್ತು ಸಾಯುಜ್ಯವನ್ನು ಪಡೆಯುತ್ತಾನೆ. ಅಂದರೆ ಭಗವಂತನಿರುವ ಲೋಕದಲ್ಲಿ ಸದಾ ಇರುತ್ತಾ (ಸಾಲೋಕ್ಯ), ಅವನಿಗೆ ಅತ್ಯಂತ ಸಮೀಪದಲ್ಲಿರುತ್ತಾ (ಸಾಮೀಪ್ಯ), ಅವನ ಧ್ಯಾನದಿಂದಾಗಿ ಅವನ ರೂಪವನ್ನೇ ಪಡೆಯುತ್ತಾ (ಸಾರೂಪ್ಯ), ಕಡೆಗೆ ಅವನಲ್ಲೇ ಸಂಪೂರ್ಣವಾಗಿ ಲೀನವಾಗಿ ತನ್ನ-ತನವನ್ನು ಸಂಪೂರ್ಣವಾಗಿ ಕಳೆದುಕೊಳ್ಳುತ್ತಾನೆ (ಸಾಯುಜ್ಯ)" ಎನ್ನುತ್ತಾರೆ ಸದಾಶಿವಬ್ರಹ್ಮೇಂದ್ರರು.



ಭಕ್ತನಾದವನು ದೇವರಿಗೆ ತನ್ನನ್ನೇ ಸಮರ್ಪಿಸಿಕೊಂಡಾಗ ಅವನಿಗೆ ಭಗವಂತ ಕೂಡಲೇ ಮುಕ್ತಿಕೊಡುತ್ತಾನೆ ಎಂದು ಸಮರ್ಥ ರಾಮದಾಸರು ಹೇಳುತ್ತಾರೆ. ತನ್ನ ನಿಜಸ್ವರೂಪದ ಅರಿವಿನೊಂದಿಗೆ ಭಗವಂತನ ತಾದಾತ್ಮ್ಯವನ್ನು ಕಂಡುಕೊಂಡಾಗ ಅದುವೇ ಸಾಯುಜ್ಯ ಮುಕ್ತಿ.

ಅಹಿರ್ಬುಧ್ನ್ಯ ಸಂಹಿತೆ ಎಂಬ ವೈಷ್ಣವ ಗ್ರಂಥದಲ್ಲಿ ಈ ಆತ್ಮನಿವೇದನದ ಆರು ಅಂಶಗಳ ವರ್ಣನೆ ಇದೆ: ೧. ಭಗವದಿಚ್ಛೆಗೆ ಅನುಗುಣವಾಗಿ ವರ್ತಿಸುವುದು, ೨. ಭಗವದಿಚ್ಛೆಗೆ ವಿರುದ್ಧವಾದುದೆಲ್ಲವನ್ನು ವರ್ಜಿಸುವುದು, ೩. ಭಗವಂತನ ರಕ್ಷೆ ತನ್ನ ಮೇಲೆ ಸದಾಕಾಲ ಇರುವುದೆಂಬ ಮಹಾವಿಶ್ವಾಸ, ೪. ತನ್ನ ಇಷ್ಟದೇವತೆಯ ಬಗ್ಗೆ ಏಕನಿಷ್ಠೆ, ೫. ತನ್ನ ರಕ್ಷಣೆಯ ಜವಾಬ್ದಾರಿ ಭಗವಂತನದೇ ಎಂದು ಸರ್ವಸಮರ್ಪಣಾಭಾವದಿಂದ ಭಕ್ತ ನಿಶ್ಚಿಂತನಾಗಿರುವುದು—ಆತ್ಮನಿಕ್ಷೇಪ, ೬.ಮುಕ್ತಿಸಾಧನೆಯಲ್ಲಿ ತನ್ನ ತಪ್ಪುಗಳೆಲ್ಲವನ್ನೂ ದೇವರಲ್ಲಿ ಬಿನ್ನವಿಸಿಕೊಂಡು ಎಲ್ಲ ಪಾತಕಗಳನ್ನು ನಿವಾರಿಸುವ ಭಗವಂತನ ಸರ್ವಶಕ್ತಿತ್ವವನ್ನು ಕೀರ್ತಿಸುವುದು. ಈ ಪ್ರಪತ್ತಿಯ ಆರು ಅಂಶಗಳೂ ತ್ಯಾಗರಾಜರ ಕೃತಿಗಳಲ್ಲಿ ವ್ಯಕ್ತವಾಗಿವೆ.

ಭಗವದ್ಭಕ್ತಿಯಲ್ಲಿ ಒಂಬತ್ತು ಬಗೆಯ ವಿಶೇಷ ರೂಪಗಳಿದ್ದರೂ ಇವುಗಳಲ್ಲಿ ಯಾವುದಾದರೂ ಒಂದನ್ನು ಪಾಲಿಸಿ ಭಗವಂತನಲ್ಲಿ ಭಕ್ತಿ ಉಂಟಾದರೆ ಜೀವನ ಧನ್ಯವಾಗಿ ಬಿಡುವುದು. ಇನ್ನು ಈ ಒಂಬತ್ತೂ ಭಕ್ತಿ ಪ್ರಕಾರಗಳನ್ನು ಅನುಸರಿಸಿ ಪಾಲಿಸಿದರೆ ಜೀವನ್ಮುಕ್ತಿಯ ಪ್ರಾಪ್ತಿಯ ಬಗ್ಗೆ ಸಂದೇಹ ಪಡಬೇಕಾದುದೇ ಇಲ್ಲವಲ್ಲವೇ? ಆದ್ದರಿಂದ ಇಂತಹ ಶುದ್ಧ ಭಕ್ತಿಯ ಪ್ರಾಪ್ತಿಗೆ ಬೇಕಾದ ಶ್ರದ್ಧೆ, ಪ್ರೇಮ ಮತ್ತು ನಿಷ್ಕಾಮ ಭಾವವನ್ನು ಬೆಳೆಸಿಕೊಳ್ಳೋಣ ಮತ್ತು ಬಾಳಿನ ಪರಮೋದ್ದೇಶವನ್ನು ಪಡೆದುಕೊಳ್ಳೋಣ.

*